ಪ್ರಭುಶಂಕರ ಅವರ ಮನೆಯಲ್ಲಿಯೇ ಅವರ ವಾಸ್ತವ್ಯ. ಮಿತ್ರರನ್ನು ತಮ್ಮ ಮನೆಯಲ್ಲಿಯೇ ಉಳಿಸಿಕೊಳ್ಳಲು, 'ಏನು ಸರ್, ಅವರ ಮೇಲೆ ನಿಮಗೆ ಅಷ್ಟು ಪ್ರೀತಿ' ಎಂದು ಕೇಳಿದರೆ, 'ನಿಜ ಹೇಳ್ತೀನಿ ಕೇಳಿ, ಪ್ರೀತೀನೂ ಇಲ್ಲ ಗೀತೀನೂ ಇಲ್ಲ, ಮಿತ್ರ, ತುಂಬಾ ಚೆನ್ನಾಗಿ ಟೀ, ಕಾಫಿ ಮಾಡ್ತಾನೆ, ನನಗೂ ನಾಲಗೆ ಕೆಟ್ಟಿದೆ. ಅದಕ್ಕೆ ಇರಿಸ್ಕೋತೀನಿ ಅಷ್ಟೇ' ಎನ್ನುತ್ತಿದ್ದರು. 'ನೋಡಿ ನನಗೂ ಅನೇಕ ಜನ ಶಿಷ್ಯರು ಸಿಕ್ಕಿದರು. ಆದರೆ ಈ ಮಿತ್ರನಂತಹ ಕೆಟ್ಟ ಶಿಷ್ಯ ಸಿಕ್ಕಿಲ್ಲ. ನಾನು ಬರೆದ ಮಹಾಪ್ರಬಂಧವನ್ನೂ, ತಾನು ಬರೆದು ಕೊಟ್ಟೆ ಎಂದು ಎಲ್ಲ ಕಡೆ ಅಪಪ್ರಚಾರ ಮಾಡ್ತಾನೆ' ಎಂದು ಹೇಳಿ ನಗುತ್ತಿದ್ದರು. ವಾಸ್ತವವಾಗಿ, ವಿ.ವಿ.ಗೆ ಮಹಾಪ್ರಬಂಧವನ್ನು ಸಲ್ಲಿಸಲು 3–4 ಪ್ರತಿಗಳನ್ನು ಮಾಡಿಸಬೇಕಾಗಿತ್ತು. ಇಂದಿನ ಹಾಗೆ ಅಂದು ಜೆರಾಕ್ಸ್‌ನ ವ್ಯವಸ್ಥೆ ಇರಲಿಲ್ಲ. ಸುಂದರ ಹಸ್ತಾಕ್ಷರ ಬರೆಯುತ್ತಿದ್ದ ಅ.ರಾ. ಮಿತ್ರ ಅವರ ಹತ್ತಿರ ಪ್ರತಿಗಳನ್ನು ಮಾಡಿಸಿದ್ದರು. ಇದನ್ನು ಮಿತ್ರ ಹಾಗೆ ಹೇಳುತ್ತಿದ್ದರು. ಇಬ್ಬರ ಮಾತಿನಲ್ಲಿಯೂ ಸತ್ಯ ಇತ್ತು – ಬೇರೆ ಬೇರೆ ಅರ್ಥದಲ್ಲಿ.

'ಮಂದಹಾಸ ಮೀಮಾಂಸೆ' ಪ್ರಭುಶಂಕರರ ಸಮಗ್ರ ಲಲಿತ ಪ್ರಬಂಧಗಳ ಸಂಕಲನ. ಇದಕ್ಕೆ ಅ.ರಾ. ಮಿತ್ರ ಅವರ 'ತಿರುಮಂತ್ರ' ಶೀರ್ಷಿಕೆಯ ಮುನ್ನುಡಿ ಇದೆ. (ಗುರುವಿಗೇ ತಿರುಮಂತ್ರ!) ಇದು ನಿಜಕ್ಕೂ ಗುರುವಿಗೆ ತಕ್ಕ ತಿರುಮಂತ್ರವಾಗಿದೆ.

'ಪ್ರಭುಶಂಕರರ ಹಾಸ್ಯ ಬರೆ(ಹ)ಗಳಲ್ಲಿ ಒಂದು ಆತ್ಮೀಯತೆಯ ಸ್ಪರ್ಶವಿದೆ. ನಮ್ಮ ಎದುರಿಗೇ ಮಾತಾಡುತ್ತಿರುವಂತೆ, ನಮ್ಮ ಪ್ರತಿಕ್ರಿಯೆಗಳನ್ನು ಅರ್ಥ ಮಾಡಿಕೊಂಡು ಉತ್ತರ ಕೊಡುತ್ತಿರುವಂತೆ ಸನ್ನಿವೇಶಗಳನ್ನು ಸೃಷ್ಟಿಸುವ ಕಲಾ ಜಾಣ್ಮೆಯಿದೆ. ವಿಚಾರದ ಸ್ಟಾಂಪನ್ನು ನೆಕ್ಕಿ ಹಾಸ್ಯದ ಸ್ಟಿಕರ್‌ಗಳನ್ನು ಓದುಗರ ವಿಳಾಸಕ್ಕೆ ಅಂಟಿಸುವ ಪ್ರಸನ್ನ ದೃಷ್ಟಿಯಿದೆ. ಲೇಖಕರ ಮಂದಹಾಸ ಮೀಮಾಂಸೆಯಲ್ಲಿ ವಿವೇಕಾನಂದರ ಒಂದು ಮಾತು ಬರುತ್ತದೆ. 'ಪ್ರಪಂಚದಲ್ಲಿ ದುಃಖ ಬೇಕಾದಷ್ಟಿದೆ. ನೀನಿಲ್ಲದೆಯೂ ಇದೆ. ನೀನಿದ್ದಿದ್ದರಿಂದಲೂ ಇದೆ. ಆದರೆ ಆ ದುಃಖವನ್ನು ಹೆಚ್ಚಿಸುವ ಹಕ್ಕು ನಿನಗಿಲ್ಲ. ಅದನ್ನು ಕಡಿಮೆ ಮಾಡುವ ಯೋಗ್ಯತೆ ನಿನಗೆ ಇದೆಯೋ ಇಲ್ಲವೋ ಅನುಮಾನ. ಆದರೆ ಅದನ್ನು ಹೆಚ್ಚಿಸದೆ ಇರುವ ಶಕ್ತಿ ನಿನಗೆ ಇದೆ. ಹೀಗೆ ನಿನ್ನ ಮುಖಕ್ಕೆ (ಮಂದಹಾಸವನ್ನು) ಅಂಟಿಸಿಕೊ. ಪ್ರಭುಶಂಕರರ ಇಲ್ಲಿಯ ಬರಹಗಳೆಲ್ಲ ಈ ಮೂಲ 'ಭೂತ' ದ್ರವ್ಯವನ್ನು ಮೈಮೇಲೆ ಲೇಪಿಸಿಕೊಂಡಿವೆ.'

ಕುವೆಂಪು ಅವರ 'ವಿಶ್ವ ಮಾನವ ಸಂದೇಶ'ಕ್ಕೆ ವ್ಯಕ್ತಿ ಪ್ರತಿರೂಪವಾದವರು ಪ್ರಭುಶಂಕರ ಅವರು. ಸದಾ ನಗುನಗುತ್ತಲೇ, ಇತರರನ್ನು ನಗಿಸುತ್ತಾ ಗಂಭೀರ ಚಿಂತನೆಗೆ ಹಚ್ಚುವ ಅವರ ವ್ಯಕ್ತಿತ್ವಕ್ಕೆ ಅವರೇ ಸಾಟಿ. ಅವರೊಬ್ಬ ದೊಡ್ಡ ವಿಚಾರವಾದಿಯಾಗಿದ್ದರೂ, ಅದನ್ನು ಅವರು ಎಂದೂ ಪ್ರದರ್ಶನಕ್ಕೆ ಇಟ್ಟು ಮಾರುಕಟ್ಟೆಯ ಸರಕಾಗಿಸಲಿಲ್ಲ. ಅವರ ವೈಚಾರಿಕ ಪ್ರಖರತೆಯನ್ನು ಕಾಣಬೇಕೆಂದರೆ, ಅವರು ಸಂಪಾದಿಸಿರುವ 'ವಿಶ್ವ ಧರ್ಮ ದರ್ಶನ' (ಎರಡು ಸಂಪುಟಗಳು; ಪ್ರ: ಸುತ್ತೂರು ಶ್ರೀಮಠ) ಬೃಹತ್ ಕೃತಿಯ ಪ್ರಸ್ತಾವನೆಯನ್ನು ಓದಬೇಕು. ಕುವೆಂಪು ಅವರ 'ವಿಚಾರ ಕ್ರಾಂತಿಗೆ ಆಹ್ವಾನ'ದ ಬಹು ವಿಸ್ತೃತ ರೂಪದ ವ್ಯಾಖ್ಯಾನದಂತೆ ಇದು ಕಂಡು ಬರುತ್ತದೆ. ಕುವೆಂಪು ಅವರ ಬಗ್ಗೆ ಎಷ್ಟೇ ಆರಾಧನಾ ಭಾವವಿದ್ದರೂ ಸಂದರ್ಭವೊದಗಿದಾಗ ಅವರ ವಿಚಾರಗಳನ್ನೂ ಪ್ರಶ್ನಿಸುವ ಎದೆಗಾರಿಕೆ ಇತ್ತು. ಒಮ್ಮೆ ಕುಕ್ಕರಹಳ್ಳಿ ಕೆರೆ ಏರಿಯ ಮೇಲೆ ಇಬ್ಬರೂ ಹೋಗುತ್ತಿದ್ದಾಗ, ಪಕ್ಕದ ರಸ್ತೆಯಲ್ಲಿ ಮಲೆಮಹದೇಶ್ವರ ಬೆಟ್ಟಕ್ಕೆ ಹೋಗಿ ಬರುತ್ತಿದ್ದ ಪರಿಷೆಯ ಜನ, 'ಉಘೇ... ಮಹಾದೇವ... ಉಘೇ ಮಲೆ ಮಾದಪ್ಪ' ಎಂದು ಉಗ್ಘಡಿಸಿಕೊಂಡು ಹೋಗುತ್ತಿರುವುದನ್ನು ನೋಡಿದ ಕುವೆಂಪು, 'ಇದೆಂತಹ ಮೌಢ್ಯ... ಈ ಜನಗಳದ್ದು' ಎಂದರಂತೆ.